(ಮೊದಲನೆ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾಪದ ಅಂಗೀಕಾರ

ಶ್ರೀ ಸಿ.ಆರ್.ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು) : ''1994ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ ''1994 ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಉಪಾಧ್ಯಕ್ಷರು :- ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತದೆ:- (1) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 99ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 7ನೇ ಸೆಪ್ಟೆಂಬರ್ 1994ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತು ಎಂದು ತಿಳಿಸುತ್ತೇನೆ. 1. ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 1994 (2) ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ 1994. 2)ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ''ಕರ್ನಾಟಕ ವಿದಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮವಳಿ 114ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 5ನೇ ಸೆಪ್ಟೆಂಬರ್ 1994 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕ 1992, ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತು ಎಂದು ಈ ಮೂಲಕ ತಿಳಿಸುತ್ತೇನೆ.''

3) ಕರ್ನಾಟಕ ವಿಧಾನ ಪರಿಷತ್ತಿನ ಹಾಗೂ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 114 ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 7ನೇ ಸೆಪ್ಟೆಂಬರ್ 1994 ರಂದು ಈ ಕೆಳಕಂಡ ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತು ಎಂದು ಈ ಮೂಲಕ ತಿಳಿಸುತ್ತೇನೆ.

1. ಕರ್ನಾಟಕ ಧನ ವಿನಿಯೋಗ (ಸಂಖ್ಯೆ : 3) ವಿಧೇಯಕ 1994,
2. ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ 1994,
3. ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 1994,

ಈಗ ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು....

ಶ್ರೀ ಸಿ.ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಇಂಡಿಯನ್ ಜಮಖಾನ ಮೈದಾನದ ಬಗ್ಗೆ ಮುಖ್ಯಮಂತ್ರಿಗಳ ಹೇಳಿಕೆ ಕೊಡಬೇಕಾಗಿದೆ. ಇದು 3-4 ಸಲ ಮುಂದಕ್ಕೆ ಹೋಗಿದೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿ ಕೊಡಿ.

ಮುಖ್ಯಮಂತ್ರಿಗಳ ಹೇಳಿಕೆ

ವಿಷಯ : ಬೆಂಗಳೂರಿನ ಇಂಡಿಯನ್ ಜಮಖಾನ ಮೈದಾನಕ್ಕೆ ನೀಡಿರುವ ಜಮೀನಿನ ಬಗ್ಗೆ :-

*ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದಂಥ ಶ್ರೀ ಬೈರೇಗೌಡರು ಒಂದು ಭೂಮಿಗೆ ಸಂಬಂಧಪಟ್ಟ ವಿಚಾರವನ್ನು ಇಲ್ಲಿ ಎತ್ತಿದ್ದಾರೆ. ಈ ಬೆಂಗಳೂರು ಮಹಾನಗರಪಾಲಿಕೆಯವರು ಸುಮಾರು 560 feet x 208/2 feet x 405 feet plus 370 feet, wheeler Road, Cox Town Bangalore ಇದಕ್ಕೆ ಸಂಬಂಧಪಟ್ಟಂಥ ಜಮೀನನ್ನು ಇಂಡಿಯನ್ ಜಮಖಾನ ಕ್ಲಬಿಗೆ ಕೊಟ್ಟಿದ್ದಾರೆ. ಅದರ ಲೀಸ್ ಅವಧಿ 35 ವರ್ಷಗಳು 18.6.73ರಿಂದ ಅದರ ವಾರ್ಷಿಕ ಬಾಡಿಗೆ ರೂ.75 ಇದನ್ನು ಲೀಸ್‌ಗೆ ಪಡೆದ ಮೇಲೆ ಅವರು ಅದರ ಮೇಲೆ ಕಟ್ಟಡವನ್ನು ಕಟ್ಟಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ ಅದು ಕೇರ್ ಬ್ರಿಲಿಯಾರ್ಡ್ಸ್ ಟೇಬಲ್ ಟೆನ್ನಿಸ್, ಗೇಮ್ಸ ರೂಂ, ಟಿವಿರೂಂ ಷೆಟಲ್ ಕಾಕ್ ಕೋರ್ಟು ಇದೆನ್ನೆಲ್ಲಾ ಇವತ್ತು ಕಟ್ಟಲಿಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಲಾನ್ ಟೆನ್ನಿಸ್ ಗ್ರಾಂಡನ್ನು ಕೂಡ ಓಪನ್ ಫೀಲ್ಡ್‌ನಲ್ಲಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದಾರೆ. ಈಗ ತಾವು ಈ ವಿಚಾರವನ್ನು ಎತ್ತಿದಮೇಲೆ ಕಾರ್ಪೊರೇಷನ್ ಕಮಿಷನರ್ ಮತ್ತು ಪೋಲೀಸ್ ಕಮಿಷನರ್ ಇಬ್ಬರನ್ನೂ ಕೂಡ ಅಲ್ಲಿಗೆ ಕಳುಹಿಸಿದ್ದೇನೆ. ಅವರನ್ನು ಕಳುಹಿಸಿದ ಮೇಲೆ ಸಾಕಷ್ಟು ಸಾರ್ವಜನಿಕರ ಪ್ರತಿಭಟನೆ ವ್ಯಕ್ತವಾಗಿದೆ, ಏಕೆಂದರೆ ಆ ಜಾಗದಲ್ಲಿ ಅದು ಒಂದೇ ಸ್ಥಳ ಇದ್ದು ಸಾರ್ವಜನಿಕರಿಗೆ ಮತ್ತು ಆಟವಾಡುವುದಕ್ಕೆ ಬೇಕಾಗಿರುವಂತದ್ದು ಅದನ್ನು ಇವತ್ತು ಓಪನ್ ಗ್ರೌಂಡ್ಡಾಗಿ ಇಟ್ಟಿದ್ದರೆ ಸಾರ್ವಜನಿಕರು ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ಅದನ್ನು ಲೀಸ್‌ಗೆ ಕೊಟ್ಟಿದುದ್ದು 72ರಲ್ಲಿ. ಈಗ ಮಕ್ಕಳಿಗೆ ಆಡಲಿಕ್ಕೆ ಸ್ಥಳವೇ ಇಲ್ಲ, ಯಾವಾಗಲೂ ಕೂಡ ನಗರಪಾಲಿಕೆಯವರ ಕರ್ತವ್ಯ ಏನಿರುತ್ತದೆ ಎಂದರೆ ಇಂತಹ ಒಂದು ಜಾಗವನ್ನು ಉಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಿಡಬೇಕು ಎಂಬುದು ಆದ್ದರಿಂದ ಸರ್ಕಾರ ಈ ಕಾರ್ಪೊರೇಷನ್ ಮತ್ತು ಪೋಲೀಸ್ ಕಮೀಷನರ್ ಅವರ ವರದಿ ಬಂದ ಮೇಲೆ ಕಾರ್ಪೊರೇಷನ್ನಿಗೆ ಒಂದು ಸೂಚನೆಯನ್ನು ಕಳುಹಿಸಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದರ ಪ್ರಕಾರ ನಮ್ಮ ನಿರ್ಣಯದ ಪ್ರಕಾರ "To use the north eastern corner of the land to the extent of 1 Acre 4 Guntas on the same conditions of lease. ಲೀಸ್ ಪೂರ್ತಿ ಕ್ಯಾನ್ಸಲ್ ಮಾಡಲಿಕ್ಕೆ ಕಾನೂನು ಪ್ರಕಾರ ಕಷ್ಟವಾಗುತ್ತದೆ. "The Government would further direct the Corporation that the remaining land